**5. ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ಕಾಯ್ದೆ, 2007ರ ಕಲಂ 192-ಎ, 192-ಬಿ ಮತ್ತು 192-ಸಿ** ರಂತೆ ಸರ್ಕಾರಿ ಜಮೀನು ಮತ್ತು ಪರಭಾರೆ ನಿಷೇದಕ್ಕೆ ಒಳಪಟ್ಟ ಜಮೀನಾಗಿದ್ದಲ್ಲಿ.

**6. ಕರ್ನಾಟಕ ಭೂ ಸುಧಾರಣಾ ಕಾಯ್ದೆ, 1961 ರ ಕಲಂ 81-ಎ** ರಂತೆ ಹೆಚ್ಚುವರಿ ಜಮೀನನ್ನು ಹೊಂದಿರುವುದಿಲ್ಲವೆಂದು ನಿಗಧಿತ ನಮೂನೆಯಲ್ಲಿ ಘೋಷಣೆ ನೀಡದಿದ್ದಲ್ಲಿ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಸುನೀತಾ.ಎಸ್)**
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ
(ನೋಂದಣಿ ಮತ್ತು ಮುದ್ರಾಂಕ, ವಿಪತ್ತು ನಿರ್ವಹಣೆ)

**ಕರ್ನಾಟಕ ಸರ್ಕಾರ**

ಸಂಖ್ಯೆ: ಕಂಇ/42/ಎಂಎನ್ಎಂಯು/2022
(ಭಾಗ-2)

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಡಾ|| ಬಿ.ಆರ್.ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ:28-09-2026

**<u>ಅಧಿಸೂಚನೆ-2</u>**

ನೋಂದಣಿ ಕಾಯ್ದೆ ಅಧಿನಿಯಮ 1908ರ ಪ್ರಕರಣ 69 (1908ರ ಕೇಂದ್ರ ಅಧಿನಿಯಮ XVI)ರ ಪ್ರಕಾರ ಪ್ರದತ್ತವಾದ ಅಧಿಕಾರದನ್ವಯ ಈಗಾಗಲೇ ರಾಜ್ಯ ಮತ್ತು ಕೇಂದ್ರ ಶಾಸನಗಳ ಕೆಲವು ಉಪಬಂಧಗಳು ನೋಂದಣಿ ಕಾಯ್ದೆ,1908ರಡಿ ನೇಮಕಗೊಂಡ ನೋಂದಣಿ ಅಧಿಕಾರಿಗಳಿಗೆ ರಾಜಸ್ವ ಸೋರಿಕೆಯನ್ನು ಮತ್ತು ಸದರಿ ಶಾಸನಗಳ ಉಪಬಂಧಗಳ ಉಲ್ಲಂಘನೆಯನ್ನು ತಡೆಯುವುದಕ್ಕಾಗಿ ಕೆಲವು ದಾಖಲೆ ಮತ್ತು ಪ್ರಮಾಣ ಪತ್ರಗಳನ್ನು ಪಡೆಯುವುದಕ್ಕೆ ಹಾಗೂ ದಸ್ತಾವೇಜುಗಳ ನೋಂದಣಿಗೆ ಸಂಬಂಧಪಟ್ಟ ಸಾರ್ವಜನಿಕರ ಹಕ್ಕು ಮತ್ತು ಬಾಧ್ಯತೆಗಳನ್ನು ಮತು ಸರ್ಕಾರದ ಕಾಯ್ದೆ ನೀತಿಯನ್ನು ಕಾಪಾಡುವ ಹಿತದೃಷ್ಟಿಯಿಂದ ಹಾಗೂ ನೋಂದಣಿ ತಂತ್ರಾಂಶದ ವ್ಯವಸ್ಥೆಯೊಂದಿಗೆ ಸಕ್ಷಮ ಪ್ರಾಧಿಕಾರಗಳು ನಿರ್ವಹಿಸುವ ವಿದ್ಯುನ್ಮಾನ ಸಂಯೋಜನೆ ಮುಖಾಂತರ ಸಂಯೋಜನೆಗೆ ಈಗಾಗಲೆ ಈ ಕೆಳಗೆ ತಿಳಿಸಿರುವಂತೆ ಹಲವಾರು ಸುತ್ತೋಲೆಗಳನ್ನು ಹೊರಡಿಸಲಾಗಿರುತ್ತದೆ.

ನೋಂದಣಿ (ಕರ್ನಾಟಕ ತಿದ್ದುಪಡಿ) ಕಾಯ್ದೆ, 2023 (ಕರ್ನಾಟಕ ಆಕ್ಟ್ ಸಂಖ್ಯೆ: 47/2024) ದಿನಾಂಕ: 22-12-2025 ಪ್ರಕರಣ **22-ಬಿ (4)**ರ ಮತ್ತು ಕರ್ನಾಟಕ ನೋಂದಣಿ (ನೋಂದಾಯಿತ ದಾಖಲಾತಿಗಳ ನಿರಾಕರಣೆ ಮತ್ತು ರದ್ದತಿ) ನಿಯಮಗಳು 2025ರ ಅಧಿಸೂಚನೆ ಸಂಖ್ಯೆ: ಆರ್‌ಡಿ/42/ಎಂಎನ್ಎಂಯು/2022 (ಭಾಗ-2) ದಿನಾಂಕ:22-12-2025 ರ **ನಿಯಮ 6(1)** ರಡಿ ದಸ್ತಾವೇಜುಗಳ ನೋಂದಣಿಯನ್ನು ನೋಂದಣಿ ಅಧಿಕಾರಿಗಳು ತಿರಸ್ಕರಿಸುವ / ಅನುಸರಿಸುವ ಉದ್ದೇಶಗಳಿಗಾಗಿ ಕೆಳಕಂಡ ಸುತ್ತೋಲೆಗಳಿಗೆ ಸಂಬಂಧಿಸಿದಂತೆ ಅಧಿಸೂಚನೆ ಹೊರಡಿಸುವ ಅವಶ್ಯಕತೆ ಇರುತ್ತದೆ.

ಆದ್ದರಿಂದ ಈ ಕೆಳಕಂಡ ಸುತ್ತೋಲೆಗಳನ್ನು ಪ್ರಕರಣ **22-ಬಿ** ರಡಿ ಊರ್ಜಿತಗೊಳಿಸಲು / ಖಾಯಂಗೊಳಿಸಲು ಈ ಅಧಿಸೂಚನೆಯನ್ನು ಹೊರಡಿಸಲಾಗಿದೆ.

| ಕ್ರ. ಸಂ. | ಸುತ್ತೋಲೆ ಸಂಖ್ಯೆ | ವಿಷಯ |
|---|---|---|
| 1 | **RGN 261 99-2000**<br>**DATE : 07-06-1999** | ನ್ಯಾಯಾಲಯಗಳಲ್ಲಿ ವ್ಯಾಜ್ಯಗಳು ಬಾಕಿ ಇರುವ ಸಂದರ್ಭಗಳಲ್ಲಿ ದಸ್ತಾವೇಜುಗಳ ನೋಂದಣಿ ಕುರಿತು. |
| 2 | **RGN 181/2007-08**<br>**Date: 24-09-2007** | ಉಪ ನೋಂದಣಿ ಕಚೇರಿಗಳಲ್ಲಿ ದಸ್ತಾವೇಜುಗಳನ್ನು ಅಮಾನತ್ತಿನಲ್ಲಿಡುತ್ತಿರುವ ಬಗ್ಗೆ. |
| 3 | **RGN/88/2005-06**<br>**Date :14-12-2005** | ಸಾಮಾನ್ಯ ಮೊಖ್ತ್ಯಾರು ನಾಮೆ (ಜನರಲ್ ಪವರ್ ಆಫ್ ಅಟಾರ್ನಿ) ಅಧಿಕಾರ ಪತ್ರದ ಮೇರೆಗೆ ಬರೆದುಕೊಡುವ ದಸ್ತವೇಜುಗಳ ನೊಂದಣಿ ವೇಳೆ ಮೊಖ್ತ್ಯಾರು ನಾಮೆ ಪತ್ರವನ್ನು ಕಡ್ಡಾಯವಾಗಿ ಹಾಜರುಪಡಿಸುವ ಬಗ್ಗೆ. |
| 4 | **RD 39 MRR 2005**<br>**Date: 11-07-2007** | ಭೂಮಿಯಲ್ಲಿ ಸಂಯೋಜಿತ ಮ್ಯುಟೇಷನ್ ವ್ಯವಸ್ಥೆಯ ಜಾರಿಗೊಳಿಸುವಿಕೆ ಮಾರ್ಗಸೂಚಿಗಳು. |
| 5 | **RD 185 MUNOMU 2001**<br>**Date: 30-10-2002** | ಖಾಸಗಿ ಭೂ ಮಾಪಕರಿಗೆ ಪರವಾನಗಿ ನೀಡಿರುವ ಬಗ್ಗೆ. |
| 6 | **RD 224 MUNOMU 2008**<br>**Date -21-07-2008** | ತಾಲ್ಲೂಕು ಉಪನೋಂದಣಾಧಿಕಾರಿಗಳು ಕಛೇರಿಯಲ್ಲಿ ನೋಂದಣಿ ಮಾಡುವ ವ್ಯವಸಾಯ ಭೂಮಿಗಳಿಗೆ 11 ಇ ನಕ್ಷೆ ಮತ್ತು ತಾಲ್ಲೂಕು ಕಛೇರಿಯಲ್ಲಿ ಮುಟೇಷನ್ ಪೂರ್ವ ತಯಾರಿಸುವ 11 ಇ ನಕ್ಷೆ ಕುರಿತು ಮುಂದುವರಿದ ಸೂಚನೆಗಳು. |
| 7 | **RD 344 MUNOMU 2008**<br>**DATE : 06-04-2009** | ದಸ್ತಾವೇಜು ನೋಂದಣಿಗೆ ಸಂಬಂದಪಟ್ಟ ರಾಜ್ಯ ಮತ್ತು ಕೇಂದ್ರ ಶಾಸನಗಳಿಗೆ ಅನುಗುಣವಾಗಿ, ಸ್ಥಿರಾಸ್ತಿಗಳ ಹಸ್ತಾಂತರಗಳನ್ನು ಒಳಗೊಂಡ ದಸ್ತಾವೇಜುಗಳ ನೋಂದಣಿಗೆ ಸಂಬಂಧಿಸಿದಂತೆ ಮಾರ್ಗದರ್ಶನ ಸೂಚನೆಗಳು. |
| 8 | **RGN/24/2010-11**<br>**Date :20-05-2010** | ಭಾರತದಲ್ಲಿರುವ ಶತ್ರುಗಳ ಸ್ಥಿರಾಸ್ತಿಗಳ ನಿರ್ವಹಣೆ ಹಾಗೂ ರಕ್ಷಣೆಗೆ ಸಂಬಂಧಿಸಿದಂತೆ ಭಾರತ ಸರ್ಕಾರದ ಪತ್ರ ಕುರಿತು. |
| 9 | **RD 6 MUNOMU 2013**<br>**Date: 24-01-2013** | ಕಂದಾಯ ಇಲಾಖೆಯ ಸುತ್ತೋಲೆ ಸಂಖ್ಯೆ ಕಂಇ 344 ಮುನೋಮು 2008 ದಿನಾಂಕ 06.4.2009 ಕ್ಕೆ ತಿದ್ದೋಲೆ. |
| 10 | **RGN/169/2012-13**<br>**Date:01-02-2013** | ಧಾರ್ಮಿಕ ಇಲಾಖೆಯ ವ್ಯಾಪ್ತಿಗೆ ಒಳಪಡುವ ಅನಧಿಕೃತ/ಸಂಸ್ಥೆಗಳ ಸಮಿತಿಗಳ ನೋಂದಣಿ ಕುರಿತು. |
| 11 | **SADUVE-100/2012-13**<br>**Date: 19-04-2013** | ದಸ್ತಾವೇಜುಗಳ ನೋಂದಣಿ ಸಮಯದಲ್ಲಿ ಪಕ್ಷಕಾರರ ನೈಜತೆ ಕುರಿತು ದಾಖಲೆಗಳನ್ನು ಪರಿಶೀಲಿಸುವ ಬಗ್ಗೆ. |
| 12 | **RD 6 MUNOMU 2013**<br>**Date 23-04-2014** | ಕಂದಾಯ ಇಲಾಖೆ ಸುತ್ತೋಲೆ ಸಂಖ್ಯೆ ಕಂಇ 344 ಮುನೋಮು 2008 ಬೆಂಗಳೂರು ದಿನಾಂಕ: 6-4-2009ರಲ್ಲಿ ತಿದ್ದೋಲೆ |

| | | |
|---|---|---|
| 13 | **RD 6 MUNOMU 2013**<br>**Date 18-07-2014** | ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸ್ಥಿರ ಸ್ವತ್ತುಗಳನ್ನು ನೋಂದಣಿ ಮಾಡುವಾಗ ಅನುಸರಿಸುವ ಕ್ರಮ. |
| 14 | **RD 6 MUNOMU 2016**<br>**Date 05-10-2016** | ಜಮೀನಿನ ಸರ್ವೆ ನಕ್ಷೆ (ಸ್ಕೆಚ್)- ನಮೂನೆ -11ಇ ಪಡೆದು ಕೃಷಿ ಭೂಮಿಗಳನ್ನು ನೋಂದಣಿ ಮಾಡುವಾಗ ಅನುಸರಿಸುವ ಕ್ರಮ. |
| 15 | **RGN/15/2016-17**<br>**Date:31-12-2016** | ನೋಂದಣಿಯಾಗಿರುವ ಸ್ಥಿರಾಸ್ತಿಗಳ (ಮಾಲೀಕತ್ವ/ Ownership) ಹಸ್ತಾಂತರ ಒಳಗೊಂಡಿರುವ ವರ್ಗಾವಣೆ ದಸ್ತಾವೇಜುಗಳ (Conveyance Deeds) ರದ್ದತಿ ಬಗ್ಗೆ. |
| 16 | **Comp/09/2003-04**<br>**Date:29-07-2017** | ಡೇಟಾ ಎಂಟ್ರಿ ತಪ್ಪುಗಳನ್ನು ತಿದ್ದುಪಡಿ ಮಾಡಲು ಆದೇಶಿಸುವ ಪೂರ್ವ ಜಿಲ್ಲಾ ನೋಂದಣಾಧಿಕಾರಿಗಳು ಅನುಸರಿಸುವ ಕ್ರಮ ಕುರಿತು. |
| 17 | **Comp/09/2003-04**<br>**Date:27-10-2017** | Implementation of action points under Business Reform Action plan 2017 – ರಡಿ ಸ್ಥಿರಾಸ್ತಿಗಳಿಗೆ ಸಂಬಂಧಿಸಿದ ದಸ್ತಾವೇಜುಗಳು ಹಾಗೂ ಪಾಲುದಾರಿಕೆ ಸಂಸ್ಥೆಗಳ ನೋಂದಣಿಯನ್ನು ಆನ್ ಲೈನ್ ಮೂಲಕ ನಿರ್ವಹಿಸುವ ಕುರಿತು. |
| 18 | **RD 31 MNMU 2024**<br>**Date: 16-08-2024** | ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಕಾವೇರಿ ತಂತ್ರಾಂಶದೊಂದಿಗೆ ULMS ಇ-ಖಾತೆ ತಂತ್ರಾಂಶವನ್ನು ಸಂಯೋಜಿಸುವ ಕುರಿತು. |
| 19 | **Comp/09/2003-04**<br>**Date:23-08-2024** | ದಸ್ತಾವೇಜಿನ ನೋಂದಣಿಯಲ್ಲಿ ಆಧಾರ್ ದೃಢೀಕರಣಕ್ಕೆ ಸಂಬಂಧಿಸಿ ಅನುಸರಿಸಬೇಕಾದ ಕ್ರಮಗಳ ಕುರಿತು. |
| 20 | **RD 20 MNMU 2023**<br>**Date 02-09-2024** | ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಕಾವೇರಿ-2 ತಂತ್ರಾಂಶದೊಂದಿಗೆ ಇ-ಆಸ್ತಿ ತಂತ್ರಾಂಶವನ್ನು ಸಂಯೋಜನೆಗೊಳಿಸುವ ಬಗ್ಗೆ. |
| 21 | **RD 20 MNMU 2023**<br>**DATE : 12-09-2024** | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸ್ಥಿರಾಸ್ತಿಗಳ ನೋಂದಣಿಗಾಗಿ ಮುದ್ರಾಂಕ ಇಲಾಖೆಯ ಕಾವೇರಿ-2 ತಂತ್ರಾಂಶದೊಂದಿಗೆ ಇ-ಆಸ್ತಿ ತಂತ್ರಾಂಶವನ್ನು ಸಂಯೋಜನೆಗೊಳಿಸುವ ಬಗ್ಗೆ. |
| 22 | **RD 20 MNMU 2023**<br>**Date-17-09-2024** | ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಕಾವೇರಿ-2 ತಂತ್ರಾಂಶದೊಂದಿಗೆ ಇ-ಆಸ್ತಿ ತಂತ್ರಾಂಶವನ್ನು ಸಂಯೋಜನೆಗೊಳಿಸುವ ಬಗ್ಗೆ. |
| 23 | **RD 20 MNMU 2023**<br>**Date-23-09-2024** | ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಕಾವೇರಿ-2 ತಂತ್ರಾಂಶದೊಂದಿಗೆ ಈಗಾಗಲೇ ಸಂಯೋಜಿಸಲಾಗಿರುವ ಇ-ಆಸ್ತಿ ತಂತ್ರಾಂಶವನ್ನು ಇತರೆ ಎಲ್ಲಾ ಜಿಲ್ಲೆಗಳಿಗೆ ವಿಸ್ತರಿಸುವ ಬಗ್ಗೆ. |
| 24 | **Comp/09/2003-04**<br>**Date : 16-05-2025** | ದಸ್ತಾವೇಜಿನ ನೋಂದಣಿ ಸಮಯದಲ್ಲಿ ಉಪ-ನೋಂದಣಾಧಿಕಾರಿಗಳು ಆದಾಯ ತೆರಿಗೆ ಕಾಯ್ದೆ-1961ರ ಕಲಂ-285 BA(1)ರಡಿಯಲ್ಲಿ ಅನುಸರಿಸಬೇಕಾದ ಕ್ರಮಗಳ ಕುರಿತು. |

**<u>ರದ್ದತಿ ಮತ್ತು ಉಳಿತಾಯ ಷರತ್ತು :-</u>**

ಹಿಂದೆ ಹೊರಡಿಸಲಾದ ಹಾಗೂ ಈ ಮೇಲೆ ತಿಳಿಸಿರುವ ಸುತ್ತೋಲೆಗಳು ಹಿಂದಿನ ಕಾನೂನಿನ ಅಡಿಯಲ್ಲಿ ಪ್ರಾರಂಬಿಸಲಾದ ಎಲ್ಲಾ ಕ್ರಮಗಳು, ಹಕ್ಕುಗಳು, ಬಾಧ್ಯತೆಗಳು, ದಂಡಗಳು ಮತ್ತು ಕಾನೂನು ಪ್ರಕ್ರಿಯೆಗಳು ಸಿಂಧುವಾಗಿರುತ್ತದೆ ಮತ್ತು ಜಾರಿಯಲ್ಲಿರುತ್ತದೆ.

ಹಳೇ ಕಾನೂನಿನ ಅಡಿಯಲ್ಲಿ ತೆಗೆದುಕೊಳ್ಳಲಾದ ಕ್ರಮಗಳನ್ನು ಹೊಸ ಕಾನೂನಿನ ಅಡಿಯಲ್ಲಿಯೂ ಮುಂದುವರೆದಿದೆ ಎಂದು ಪರಿಗಣಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಸುನೀತಾ.ಎಸ್)**
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ
(ನೋಂದಣಿ ಮತ್ತು ಮುದ್ರಾಂಕ, ವಿಪತ್ತು ನಿರ್ವಹಣೆ)

**PR-722**

**ಕರ್ನಾಟಕ ಸರ್ಕಾರ**

ಸಂಖ್ಯೆ: RD-TNV/4/2025

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಡಾ. ಬಿ.ಆರ್. ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ:01.10.2026

**<u>ಅಧಿಸೂಚನೆ</u>**

ದಕ್ಕಿಣ ಕನ್ನಡ ಜಿಲ್ಲೆಯನ್ನು ಮಂಗಳೂರು ಜಿಲ್ಲೆ ಎಂದು ಮರುನಾಮಕರಣ ಮಾಡುವ ಕುರಿತು ರಾಜಕಾರಣಿಗಳು, ಸಾಮಾಜಿಕ ಚಿಂತಕರು, ಸರ್ವದರ್ಮದ ಹಿರಿಯರು ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ವಿವಿಧ ಸಂಘಟನೆಗಳಿಂದ ಹಲವಾರು ಮನವಿಗಳು ಸರ್ಕಾರದಲ್ಲಿ ಸ್ವೀಕೃತಗೊಂಡಿರುತ್ತವೆ. ಈ ಕುರಿತು ಸಾರ್ವಜನಿಕರ ಬೇಡಿಕೆ ಹಾಗೂ ಆಡಳಿತಾತ್ಮಕ ಅನುಕೂಲತೆಗಳನ್ನು ಗಣನೆಗೆ ತೆಗೆದುಕೊಂಡು ದಕ್ಷಿಣ ಕನ್ನಡ ಜಿಲ್ಲೆಯನ್ನು ಮಂಗಳೂರು ಜಿಲ್ಲೆ ಎಂದು ಮರುನಾಮಕರಣ ಮಾಡಲು ಉದ್ದೇಶಿಸಲಾಗಿದೆ.

ಅದರಂತೆ, ಭಾರತ ಸರ್ಕಾರದ ಗೃಹ ಮಂತ್ರಾಲಯದ ಪತ್ರ ಸಂಖ್ಯೆ: 130/53-Public, ದಿನಾಂಕ: 11.9.1953ರ ಮಾರ್ಗಸೂಚಿಗಳನ್ವಯ ಹಾಗೂ ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರ ಸೆಕ್ಷನ್ 4(4A) ರಡಿ ಪ್ರದತ್ತವಾದ ಅಧಿಕಾರದನ್ವಯ ಮತ್ತು ಈ ಸಂಬಂಧ ಅದನ್ನು ಸಬಲಗೊಳಿಸುವ ಇತರ ಎಲ್ಲಾ ಅಧಿಕಾರಗಳನ್ನು ಚಲಾಯಿಸಿ, ದಕ್ಷಿಣ ಕನ್ನಡ ಜಿಲ್ಲೆಯನ್ನು ಮಂಗಳೂರು ಜಿಲ್ಲೆ ಎಂದು ಮರುನಾಮಕರಣ ಮಾಡುವ ಕುರಿತು ಸಾರ್ವಜನಿಕರಿಂದ ಯಾವುದೇ ಸಲಹೆ/ ಅಭಿಪ್ರಾಯಗಳು ಸ್ವೀಕೃತವಾದಲ್ಲಿ ಅವುಗಳನ್ನು ಪರಿಶೀಲಿಸಲಾಗುವುದು.

ಈ ಕೆಳಗಿನ ಅನುಸೂಚಿಯಲ್ಲಿ ತಿಳಿಸಿರುವಂತೆ, ದಕ್ಷಿಣ ಕನ್ನಡ ಜಿಲ್ಲೆಯನ್ನು ಮಂಗಳೂರು ಜಿಲ್ಲೆ ಎಂದು ಮರುನಾಮಕರಣ ಮಾಡುವ ಕುರಿತು ಸಾರ್ವಜನಿಕರಿಂದ ಅಭಿಪ್ರಾಯ/ ಸಲಹೆಗಳನ್ನು ಈ ಕೆಳಕಂಡ ವಿಳಾಸಗಳಿಗೆ ಲಿಖಿತ ರೂಪದಲ್ಲಿ ಅಥವಾ ಇ-ಮೇಲ್ ಮೂಲಕ ಈ ಅಧಿಸೂಚನೆಯು ರಾಜ್ಯ ಪತ್ರದಲ್ಲಿ ಪ್ರಕಟಗೊಂಡ ದಿನಾಂಕದಿಂದ 30 ದಿನಗಳೊಳಗಾಗಿ ಸಲ್ಲಿಸಬಹುದಾಗಿದೆ.

i) ಮಾನ್ಯ ಮುಖ್ಯಮಂತ್ರಿಯವರು ಸಚಿವಾಲಯ , ಕೊಠಡಿ ಸಂಖ್ಯೆ 235,
2ನೇ ಮಹಡಿ, ವಿಧಾನಸೌಧ, ಬೆಂಗಳೂರು-560001-e-mail:cm.kar@nic.in